ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 392/2017
ಡಿ.ಡಬ್ಲ್ಯೂ : 1

ದಿನಾಂಕಃ 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: ವಾದಿ ಪರ ಶ್ರೀ ಎಮ್ .ಜೆ. ಎಸ್ ವಕೀಲರಿಂದಃ

1. ನಿ.ಡಿ. 7 ರಲ್ಲಿ ಹೇಳಿರುವ ದಾವೆಯ ವಾದಿ ಹಾಗೂ ಪ್ರತಿವಾದಿಗಳಿಗೂ ಹಾಗೂ ಈ ಪ್ರಕರಣದ ವಾದಿಗಳಿಗೂ ಮೊದಲಿನಿಂದಲೂ ಮನಸ್ತಾಪ ಇತ್ತು ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಪಕೀರ್ ಸಾಹೇಬ್ ರವರನ್ನು ಯಾಕೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಅವರು ಆ ದಾವೆಗೆ ಸಂಬಂಧಪಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಆ ದಾವೆಯಲ್ಲಿ ನಡೆದ ರಾಜಿ ಪ್ರಕ್ರಿಯೆಗಾಗಲೀ, ವ್ಯವಹರಣೆಗಾಗಲೀ ಈ ದಾವೆಯ ವಾದಿಗಳು ಭಾಗವಹಿಸಿರುವುದಿಲ್ಲ ಎಂದರೆ ಸರಿ.

2. ವಾದಿರಿಗೆ ಮೋಸ ಮಾಡುವ ಉದ್ದೇಶದಿಂದ ಆ ಎರಡು ದಾವೆಗಳನ್ನು ಸಲ್ಲಿಸಿ ಅವರಿಗೆ ಗೊತ್ತಾಗದ ಹಾಗೆ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ದಾವೆಗೆ ಸಂಬಂಧಪಟ್ಟಂತೆ ಫಾರಂ ನಂಬ್ರ 7, 10 ಹಾಗೂ ತೀರ್ಪಿನ ಪ್ರತಿಗಳನ್ನು ಪರಿಶೀಲಿಸಿರುತ್ತೇನೆ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ 1974 ರ ಹಿಂದಿನ ದಾಖಲೆಗಳನ್ನು ನಾನು ಪರೀಲನೆ ಮಾಡಿರುವುದಿಲ್ಲ.

3. ದಾವಾ ಎ ಶೆಡ್ಯೂಲ್ ಆಸ್ತಿಗಳಿಗೆ ಸಂಬಂಧಪಟ್ಟಂತೆ ಹೆರಿಯಣ್ಣ ಹೆಗ್ಡೆ , ಶಿವರಾಮ ಹೆಗ್ಡೆ ಯವರು ಮಾಲೀಕರಾಗಿದ್ದರು ಎಂದರೆ ಸರಿ. ಸಾಕ್ಷಿಗೆ 3 RTC ಗಳನ್ನು ತೋರಿಸಿದ್ದು ಸಾಕ್ಷಿ ಆ RTC ಗಳು ನನ್ನ ತಂದೆಯ ದಣಿಗಳ ಹೆಸರಿನಲ್ಲಿ ಇರುತ್ತದೆ ಎಂದು ಹೇಳಿದ್ದರಿಂದ ಸದರಿ ದಾಖಲೆಗಳನ್ನು ನಿ.ಪಿ. **12** ರಿಂದ **14** ಎಂದು ಗುರುತಿಸಲಾಯಿತು. ಅಬ್ದುಲ್ ಖಾದ್ರಿ ನನ್ನ ತಂದೆ. ನನ್ನ ತಂದೆಯವರು ಭೂ ನ್ಯಾಯ ಮಂಡಳಿಗೆ ಹೇಳಿಕೆ ಕೊಟ್ಟಿರುವುದನ್ನು ನಾನು ನೋಡಿರುವುದಿಲ್ಲ.

4. ಶೇಖ್ ಬ್ಯಾರಿ ತಂದೆ ಅಬ್ದುಲ್ ಬ್ಯಾರಿ ನನ್ನ ತಂದೆಯ ತಂದೆ. ಯಾಕೂಬ್ ಸಾಹೆಬ್ ಬಿನ್ ಅಹಮ್ಮದ್ ಸಾಹೇಬ್ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಶೇಖ್ ಬ್ಯಾರಿಯವರ ವಾರೀಸುದಾರರಾಗಿ ನನ್ನ ತಂದೆ ನಿ.ಡಿ.1 ರ ದಾಖಲೆಯನ್ನು ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಅಧಿಬೋಗದಾರಿಕೆ ಶೇಖ್

ಬ್ಯಾರಿಯವರ ವಾರೀಸುದಾರಿಕೆಯಲ್ಲಿ ನಮ್ಮ ತಂದೆಯವರಿಗೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ.

5. ಸರ್ವೆ ನಂಬ್ರ 182/1 ರ 84 ಸೆಂಟ್ಸ್ ವಾದಿಯವರ ಹಕ್ಕಿನ ಆಸ್ತಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 182/1 ರ ಮುಟೇಶನ್ ಆಸ್ತಿ ಇದು ಎಂದರೆ ಸಾಕ್ಷಿ ದಾಖಲೆ ನೋಡಿ ಹೌದು ಎಂದು ನುಡಿಯುತ್ತಾರೆ. ಅದನ್ನು ನಿ.ಪಿ.**15** ಎಂದು ಗುರುತಿಸಲಾಯಿತು. ನಿ.ಡಿ. 7 ರ ಪ್ರಕರಣದಲ್ಲಿ ಆದ ರಾಜಿ ಡಿಕ್ರಿ ಆಗಲೀ, ಡಿಕ್ರಿಯಾಗಲೀ, ನಂತರದ ಕ್ರಯ ಪತ್ರಗಳಲ್ಲಿ ವಾದಿಗಳು ಪಕ್ಷಗಾರರು ಇರುವುದಿಲ್ಲ ಎಂದರೆ ಸರಿ. ವಾದಿಯವರ ಹಕ್ಕಿಗೆ ಅದು ಸಂಬಂದಪಟ್ಟಿರುವುದಿಲ್ಲ ಎಂದರೆ ಸರಿ.

6. ಆ ಪ್ರಕರಣ ದಾಖಲಾಗುವಾಗ ಈ ಪ್ರಕರಣದ ವಾದಿಗಳು ಗುಲ್ವಾಡಿ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿ. ಆ ಪ್ರಕರಣದ ಪಕ್ಷಗಾರರು ಈ ಪ್ರಕರಣದ ವಾದಿಗಳಿಗೆ ವ್ಯಾಜ್ಯದ ಬಗ್ಗೆ ಯಾವುದೇ ಮಾಹಿತಿ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಅದು ಸಂಬಂದಪಟ್ಟಿರದೇ ಇರುವುದರಿಂದ ಅವರಿಗೆ ಮಾಹಿತಿ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದ ವ್ಯಾಜ್ಯ ಸ್ವತ್ತುಗಳನ್ನು ನಾವುಗಳು ಕಬಳಿಸುವ ಸಲುವಾಗಿ ಈ ಪ್ರಕರಣದ ವಾದಿಗಳಿಗೆ ನಿ.ಡಿ. 7 ರ ವ್ಯಾಜ್ಯದ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

7. ಈ ವ್ಯಾಜ್ಯದಲ್ಲಿ ವಾದಿಯವರಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇದ್ದು ಅವರು ಅದನ್ನು ಪಡೆಯಲು ಭಾದ್ಯಸ್ಥರು ಎಂದರೆ ಸರಿಯಲ್ಲ. ಅವರ ಹಕ್ಕನ್ನು ಕಸಿದುಕೊಳ್ಳುವ ಸಲುವಾಗಿ ನಾನು ಹಾಗೂ ಪ್ರತಿವಾದಿಗಳು ಪರಸ್ಪರ ಶಾಮಿಲಾಗಿ ಸಾಧನೆ ಮಾಡುತ್ತಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ನಿ.ಡಿ.7 ರ ಯಾವುದೇ ವ್ಯವಹರಣೆ ವಾದಿಯವರ ಹಕ್ಕಿಗೆ ಬಾಧಿಸತಕ್ಕದ್ದಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನನಗೆ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ